# ‘ಮುಗ್ಧತೆ ಕಾಮಿಡಿ ಗುಣಗಳೇ ಪೆಂಗ್ಯಾನ ಶಕ್ತಿ

**ನಂದೀಶ್**
**ಸ್ಟಾರ್ ಸುವರ್ಣದ ‘ಆಸೆ’ಯ ಮನೋಜ್**

◆ **ನಿಮ್ಮ ಬಣ್ಣ ಹಚ್ಚುವ ಹಂಬಲ ಯಶಸ್ಸು ಗಳಿಸಿದ್ದು ಹೇಗೆ?**

‘ಲೈಟ್ಸ್ ಕ್ಯಾಮೆರಾ ಆಕ್ಷನ್’ ಸಿನಿಮಾದಲ್ಲಿ ಪ್ರತಿನಾಯಕನ ಪಾತ್ರ ಮಾಡಿದೆ. ಆ ಕಥೆಯೊಳಗಣ ಸಿನಿಮಾದಲ್ಲಿ ನಾಯಕನಾಗಿದ್ದೆ. ಆ ಪಾತ್ರವೇ ನನಗೆ ಮೊದಲನೆಯದು. ಆದರೂ ವೀಕ್ಷಕರಿಗೆ ಚಿರಪರಿಚಿತ ಆಗಿದ್ದು ‘ಗಾಳಿಪಟ’ ಧಾರಾವಾಹಿಯ ಮೂಲಕ. ಅದಕ್ಕಿಂತ ಮುಂಚೆ ಬಣ್ಣ ಹಚ್ಚಿದ್ದರೂ ಅಷ್ಟಕ್ಕಷ್ಟೆ. ನಟ ಆಗಬೇಕು ಎನ್ನುವುದು ನನ್ನ ಬಾಲ್ಯದ ಕನಸು. ಪ್ರೌಢಶಾಲೆ–ಪಿಯುಸಿ ಓದುವಾಗಲೇ ಆ ಪ್ಯಾಶನ್ ದೊಡ್ಡ ಮಟ್ಟದಲ್ಲಿ ಬೆಳೆಯಿತು. ಅದಕ್ಕೆ ಪೂರಕವಾಗುವ ಹಿನ್ನೆಲೆ ನನಗೆ ಇರಲಿಲ್ಲ. ಆ ಕ್ಷೇತ್ರದಲ್ಲಿ ಪರಿಚಿತರು, ಸಂಬಂಧಿಕರು ಯಾರೂ ಇರಲಿಲ್ಲ. ನನ್ನ ಸ್ವಂತ ಪರಿಶ್ರಮದ ಮೂಲಕವೇ ಇಲ್ಲಿ ಬೆಳೆಯುತ್ತಿದ್ದೇನೆ. ಆರಂಭದಲ್ಲಿ ನಟನೆಯ ತರಬೇತಿ ಶಾಲೆಗೆ ಸೇರಿದೆ. ಎರಡು ತಿಂಗಳ ಅವಧಿಯ ತರಗತಿ ಮೂಲಕ ನನ್ನ ಪಯಣ ಆರಂಭವಾಯಿತು. ಅಲ್ಲಿಂದ ಬೇರೆ ಬೇರೆ ಸ್ನೇಹಿತರು ಸಿಕ್ಕರು. ಫೋಟೊಶೂಟ್ ಮಾಡಿಸಿಕೊಂಡು ಅಲೆಯಲು ಶುರುಮಾಡಿದೆ. ಕೊನೆಗೂ ನನ್ನ ಕನಸಿನಂತೆ ನಟನಾಗಿದ್ದೇನೆ.

◆ **ಪೆಂಗ್ಯಾ ಅನ್ನೋದನ್ನು ಪ್ರಸಿದ್ಧಿ ಮಾಡಿದ್ದೀರಿ. ಅದು ಹೇಗಾಯಿತು?**

ಮೊದಲು ಅವನು ಮನೋಜ ಮಾತ್ರ ಆಗಿದ್ದ. ಅವನಿಗೆ ಯಶಸ್ವಿ ಪ್ರೇಮಿ ಆಗಬೇಕು ಎನ್ನುವುದಷ್ಟೇ ಆಸೆ ಇತ್ತು. ಅವಳನ್ನು ಮೆಚ್ಚಿಸಲು ಶ್ರಮಿಸುತ್ತಾನೆ. ಆತ ತನ್ನಪ್ಪ ನೋಡಿದ ಹುಡುಗಿಯನ್ನು ಹಸೆ ಏರುವ ಹೊತ್ತಿನಲ್ಲಿ ಬಿಟ್ಟು ಹೋಗುತ್ತಾನೆ. ಕೊನೆಗೆ ತಾನು ಪ್ರೀತಿಸಿದ ಹುಡುಗಿಯಿಂದ ಮೋಸ ಹೋಗುತ್ತಾನೆ. ಕ್ರಮೇಣ ಪೆಂಗ್ಯಾ ಆಗ್ತಾನೆ. ಏನೇ ಮಾಡಿದರೂ ಮೋಸಕ್ಕೆ ತುತ್ತಾಗುತ್ತಾನೆ. ಒಂದು ರೀತಿ ಯಡವಟ್ಟು ರಾಜನಂತೆ ಕಾಣಿಸುತ್ತಾನೆ. ಯಾಮಾರುವ ಸಂದರ್ಭಗಳು ಹೆಚ್ಚು ಹೆಚ್ಚು ಅವನಿಗೆ ಎದುರಾಗುತ್ತವೆ. ಸೂರ್ಯ ಬೇರೆ ಅವನಿಗೆ ಪೆಂಗ್ಯಾ ಎಂದು ಮತ್ತೆ ಮತ್ತೆ ಹೇಳುತ್ತಾನೆ. ಮನೋಜ್ ವಿಚಿತ್ರ ಸ್ವಭಾವದ ವ್ಯಕ್ತಿತ್ವದವನು. ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ತಾನು ಚೆನ್ನಾಗಿ ಇದ್ದರೆ ಸಾಕು ಎಂದು ಭಾವಿಸುತ್ತಾನೆ. ಬೇರೆಯವರಿಗೆ ಎಂದೂ ಕೇಡು ಮಾಡುವುದಿಲ್ಲ. ತಮಾಷೆಯನ್ನು ಮಾಡುತ್ತಾನೆ. ಅವನ ನಡವಳಿಕೆಯಿಂದಲೇ ಜನರಿಗೆ ಹತ್ತಿರವಾಗುವುದರಿಂದ ಜನಪ್ರಿಯ ಆಗಿದ್ದಾನೆ. ಅಂದರೆ ಅವನ ಮುಗ್ಧತೆ ಮತ್ತು ಕಾಮಿಡಿ ವ್ಯಕ್ತಿತ್ವವೇ ಅದಕ್ಕೆ ಕಾರಣ.



◆ **ಸೀರಿಯಲ್ ನೋಡ್ತಿರಾ? ನಿಮಗೆ ಹೇಗೆ ಅನ್ನಿಸುತ್ತದೆ?**

ನನ್ನ ಸೀರಿಯಲ್ ತಪ್ಪದೇ ನೋಡುತ್ತೇನೆ. ಬೇರೆ ಧಾರಾವಾಹಿಗಳನ್ನು ನೋಡಿದರೂ ತೀರಾ ಕಡಿಮೆ. ನಮ್ಮ ಮನೆಯಲ್ಲಿ ಬೇರೆ ಬೇರೆ ನೋಡುತ್ತಾರೆ. ಅವರು ನೋಡುತ್ತಿರುವುದನ್ನು ಬಿಡುವು ಇದ್ದಾಗ ನಾನೂ ನೋಡುತ್ತೇನೆ. ಶೂಟಿಂಗ್ ಜಿಮ್ ಎಂದು ನಾನೂ ಬಿಜಿ ಇರುತ್ತೇನೆ. ನನ್ನ ಸೀರಿಯಲ್ ನೋಡಿ ಹೇಗೆ ಬಂದಿದೆ, ಏನಾದರೂ ತಿದ್ದುಪಡಿ ಬೇಕಿದೆಯಾ ಎನ್ನುವ ಸ್ವಯಂ ಮೌಲ್ಯಮಾಪನ ಮಾಡುತ್ತೇನೆ.

◆ **ನಿಮ್ಮ ಕನಸಿನ ಪಾತ್ರಗಳ ಬಗ್ಗೆ ಏನು ಹೇಳುತ್ತೀರಿ?**

ಬಹುತೇಕ ಕನಸಿನ ಪಾತ್ರಗಳು ಮನೋಜನ ಮೂಲಕ ಈಡೇರಿದೆ ಎಂದುಕೊಂಡಿದ್ದೇನೆ. ದೇವಸ್ಥಾನದಲ್ಲಿ ಭಿಕ್ಷೆ ಬೇಡುವ ಸನ್ನಿವೇಶ ಮಾಡುತ್ತೇನೆ. ಅಪ್ಪ–ಅಮ್ಮನಿಂದ ಹೊಡೆಸಿಕೊಂಡು ಮನೆ ಬಿಟ್ಟು ಹೋಗುವುದಿದೆ. ಹಸಿದ ಹೊಟ್ಟೆ ತಣಿಸಿಕೊಳ್ಳಲು ಸರತಿ ಸಾಲಿನಲ್ಲಿ ನಿಂತು ಪ್ರಸಾದ ಬೇಡಿ ತಿನ್ನುವ ದೃಶ್ಯಗಳು ಸಾಕಷ್ಟು ಸಿಕ್ಕಿವೆ. ಸಾಮಾನ್ಯವಾಗಿ ಧಾರಾವಾಹಿಗಳಲ್ಲಿ ಇಂತಹ ಅವಕಾಶಗಳು ತುಂಬ ಕಡಿಮೆ. ಅಂತಹ ಅವಕಾಶ ನನಗೆ ಸಿಕ್ಕಿರುವುದು ಅದೃಷ್ಟವೇ ಸರಿ. ಗೊತ್ತಿಲ್ಲದೆ ತೊಂದರೆ ಎದುರಿಸುವುದು ಚೆನ್ನಾಗಿದೆ. ನನಗೆ ನೆಗೆಟಿವ್ ಪಾತ್ರಗಳು ಇಷ್ಟ. ಪಕ್ಕಾ ಹಳ್ಳಿಯ ಮುಗ್ಧನ ಪಾತ್ರ ಮಾಡಬೇಕು. ಅದರಲ್ಲೂ 70–80ರ ದಶಕದ ಕುಗ್ರಾಮದ ನಾಗರಿಕನಾಗಿ ಕಾಣಿಸಿಕೊಳ್ಳಬೇಕು.

◆ **ಒಬ್ಬ ಹೊಸ ನಟನಿಗೆ ಎಂತಹ ಸವಾಲುಗಳು ಇರುತ್ತವೆ? ಅವನು ಹೇಗೆ ಅದೆಲ್ಲವನ್ನು ಸರಿದೂಗಿಸಿಕೊಳ್ಳಬೇಕು?**

ಹೊಸಬರಿಗೆ ತುಂಬ ಸವಾಲುಗಳು ಇರುತ್ತವೆ. ಅವಕಾಶ ಪಡೆಯುವುದೇ ದೊಡ್ಡ ಹೋರಾಟ ಆಗಿರುತ್ತದೆ. ನನ್ನ ಹಾಗೆ ನೂರಾರು ಜನ ಒಂದೇ ಅವಕಾಶಕ್ಕಾಗಿ ಕಾದಿರುತ್ತಾರೆ. ತೀವ್ರವಾದ ಸ್ಪರ್ಧೆ ಇದೆ. ನಟನಾಗಬೇಕು ಎನ್ನುವುದು ಸಿಕ್ಕಾಪಟ್ಟೆ ಬಯಕೆ ಇದ್ದರೆ ಸಾಲದು. ಅದಕ್ಕೆ ತಕ್ಕಂತೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಇಚ್ಛೆ ಇರಬೇಕು. ಮೂಲತಃ ಪ್ರತಿಭೆ ಇರಬೇಕು. ಪೂರ್ಣಾವಧಿ ಸಮಯ ಕೊಡಬೇಕಾಗುತ್ತದೆ. ಬೇರೆ ಕೆಲಸದ ಜೊತೆ ಇದನ್ನು ಮಾಡಲು ಆಗುವುದಿಲ್ಲ. ಅದಕ್ಕೆ ತಯಾರಾಗಬೇಕು, ಆರಂಭದಲ್ಲಿ ಪಡೆಯುವುದಕ್ಕಿಂತ ತ್ಯಾಗ ಹೆಚ್ಚಿರುತ್ತದೆ. ಹಣಕಾಸಿನ ತೊಂದರೆ ಕಾಡಬಹುದು. ಸಂಪಾದನೆ ಅಷ್ಟಕ್ಕಷ್ಟೇ. ಆದರೂ ಸಹನೆಯಿಂದ ಕಾದರೆ ಖಂಡಿತ ಒಳ್ಳೆಯ ಅವಕಾಶಗಳು ಸಿಗುತ್ತವೆ. ಏನೇ ಆದರೂ ತಾಳ್ಮೆ ತುಂಬ ಬೇಕು. ಈಗ ರೀಲ್ಸ್ ಮೂಲಕ ಅವಕಾಶ ಹುಡುಕಬಹುದು. ಅಲ್ಲೂ ಜನಪ್ರಿಯತೆಗೆ ಸಮಯ ಬೇಕಾಗುತ್ತದೆ. ಒಟ್ಟಾರೆ ಸಮಯ ಮತ್ತು ತಾಳ್ಮೆ ತುಂಬ ಮುಖ್ಯ.

■ **ರಾಘವೇಂದ್ರ ಕೆ.**